

ಸ್ಕ್ರಂಚಿ ವಿನ್ಯಾಸಕಿ
ಇಶಾ ಸುಲೋಚನ

# ಬಣ್ಣದ ಸ್ಕ್ರಂಚಿ

## ಕೇಶವಿನ್ಯಾಸ ನವನವೀನ!

**ಕೇಶವಿನ್ಯಾಸಕ್ಕೆ ಬಳಸುವ ಹೇರ್‌ಬ್ಯಾಂಡ್‌ನಂತಹ ಸಾಧನವೇ ಸ್ಕ್ರಂಚಿ. ಇದನ್ನು ಮನೆಯಲ್ಲೇ ಮಾಡಿ ಸುಂದರವಾಗಿ ಕೇಶವಿನ್ಯಾಸ ಮಾಡಿಕೊಳ್ಳಬಹುದು. ಪೋನಿ ಟೇಲ್ ರೀತಿಯ ವಿನ್ಯಾಸಕ್ಕೆ ಇದು ಹೇಳಿಮಾಡಿಸಿದ್ದು. ದಕ್ಷಿಣ ಕನ್ನಡದ ಪುತ್ತೂರಿನಲ್ಲಿರುವ ಇಶಾ ಸುಲೋಚನ ಸ್ಕ್ರಂಚಿಯಲ್ಲೇ ಹಲವು ವಿನ್ಯಾಸ ಮಾಡಿ ಫ್ಯಾಷನ್‌ಪ್ರಿಯರ ಮನತಣಿಸುತ್ತಿದ್ದಾಳೆ.**

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಫ್ಯಾಷನ್ ಪ್ರಪಂಚದಲ್ಲಿ ಕೆಲವು ಸಾಧನಗಳು ಎಂದಿಗೂ ಔಟ್‌ಡೇಟೆಡ್ ಆಗುವುದೇ ಇಲ್ಲ. ಪೋನಿ ಟೇಲ್ ಹಲವಾರು ವರ್ಷಗಳಿಂದಲೂ ಫ್ಯಾಷನ್ ಜಗತ್ತಿನಲ್ಲಿ ಟ್ರೆಂಡ್ ಆಗಿಯೇ ಉಳಿದಿರುವ ಕೇಶ ಶೈಲಿ. ಈ ಕೇಶ ವಿನ್ಯಾಸ ಮಾಡಲು ಬೇಕಾಗಿರುವುದು ಬರೀ ಒಂದು ಹೇರ್‌ಬ್ಯಾಂಡ್ ಅಷ್ಟೆ. ರಬ್ಬರ್‌ಬ್ಯಾಂಡ್‌ನಿಂದ ಮಾಡಿದ ಹಲವು ವಿನ್ಯಾಸ, ಬಣ್ಣಗಳ ಹೇರ್‌ಬ್ಯಾಂಡ್‌ನಿಂದ ಪೋನಿಟೇಲ್ ಮಾಡಬಹುದು. ವರ್ಷಗಳು ಉರುಳಿದ ಹಾಗೇ ಫ್ಯಾಷನ್‌ಗಾಗಿ ಬಟ್ಟೆಯಿಂದ ಮಾಡಿದ ಹೇರ್‌ಬ್ಯಾಂಡ್ ಮಾರುಕಟ್ಟೆಗೆ ಬಂತು. ಇದರಲ್ಲಿ ಹೂವಿನಾಕಾರ, ಚಿಟ್ಟೆಯಾಕಾರ, ಹಣ್ಣು, ತರಕಾರಿಗಳ ಆಕಾರದ ಬ್ಯಾಂಡ್‌ಗಳು ಜನಪ್ರಿಯವೂ ಆಯಿತು. ಯುವತಿಗೆ ಮಾಡರ್ನ್ ಲುಕ್ ಕೊಡಲು ಇದು ಸಹಕಾರಿಯೂ ಆಯಿತು. ಬಣ್ಣ ಬಣ್ಣದ ಬಟ್ಟೆ ಹಾಗೂ ಇಲಾಸ್ಟಿಕ್ ಮಾತ್ರವೇ ಬಳಸಿ ತಯಾರಿಸುವ ಸ್ಕ್ರಂಚಿ ನೋಡಲು ಆಕರ್ಷಕವೂ ಆಗಿದೆ. ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಬಹುದು, ಕಾಂಟ್ರಾಸ್ಟ್, ಮಿಕ್ಸ್ ಅಂಡ್ ಮ್ಯಾಚ್ ಆಗಿಯೂ ಉಪಯೋಗಿಸಬಹುದು.